**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 446/2014**

| | | | |
|---|---|---|---|
| **ಹೆಸರು** | **:** | **ಬಸವರಾಜ ತೇಲಿ** | **ಚಾ.ಸಾ.15** |
| **ತಂದೆಯ ಹೆಸರು** | **:** | **ಗುರುಲಿಂಗಪ್ಪ** | **ಪ್ರಾ.ಸಾ.11** |
| **ವಯಸ್ಸು** | **:** | **46 ವರ್ಷ** | **ದಿನಾಂಕಃ 06-04-2024** |
| **ಉದ್ಯೋಗ** | **:** | **ಸಿ.ಪಿ.ಐ** | |
| **ವಾಸಸ್ಥಳ** | **:** | **ರಾಯಚೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನವೆಂಬರ 2012 ರಿಂದ ಸೆಪ್ಟಂಬರ 2016 ರ ವರೆಗೆ ರಟಕಲ್ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 258-11-2012 ರಂದು ಮಧ್ಯಾಹ್ನ 2 ಗಂಟೆಗೆ ಪ್ರಾಸಾ-10 ರವರು ನಮ್ಮ ಠಾಣೆಗೆ ಹಾಜರಾಗಿ ನಿಪಿ-9 ರ ಹೇಳಿಕೆಯನ್ನು ಸಲ್ಲಿಸಿದ್ದು ಸದರಿ ಹೇಳಿಕೆಯ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆ 53/2012 ರಲ್ಲಿ ಪ್ರ.ವ.ವ.ಯನ್ನು ದಾಖಲಿಸಿದ್ದೇನೆ. ಈಗ ನೋಡುತ್ತಿರುವ ನಿಪಿ-9 ರ ದೂರಿನಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವ.ಯನ್ನು ನಿಪಿ-10 ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 3.30 ರಿಂದ 4.30 ರವರೆಗೆ ಪ್ರಾಸಾ-10 ರವರು ತೋರಿಸಿದಂತೆ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಒಂದು ಕಾರು ಮತ್ತು ಒಂದು ಕಲ್ಲನ್ನು ಸ್ಥಳದಿಂದ ಜಪ್ತಿ ಮಾಡಿದ್ದೇನೆ. ಈಗ ನೋಡುತ್ತಿರುವ ಪಂಚನಾಮೆ ನಾನೇ ಜರುಗಿಸಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ಪಂಚನಾಮೆಯನ್ನು ನಿಪಿ-11 ಎಂದು ಮತ್ತು ಅದರಲ್ಲರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಾಸಾ-10 ರವರ ಪುರಾವಣೆ ಹೇಳಿಕೆಯನ್ನು ಪಡೆದಿದ್ದೇನೆ. ನಂತರ ಸಾಕ್ಷಿದಾರರಾದ ಚಾಸಾ-5 ರಿಂದ 12 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಅದೇ ದಿನ ಆರೋಪಿಯಾದ ಮಹ್ಮದ ಜಹೀರರವರ ಸ್ವ ಖುಷಿ ಹೇಳಿಕೆಯನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿರುವ ಸ್ವ ಖುಷಿ ಹೇಳಿಕೆಯನ್ನು ನಿಪಿ-12 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ದಿನಾಂಕ 07-12-

2012 ರಂದು ಚಾಸಾ-13 ರವರು ನ್ಯಾಯಾಲಯದಿಂದ ವಾಹನ ಬಿಡುಗಡೆ ಮಾಡುವ ಆದೇಶವನ್ನು ಸಲ್ಲಿಸಿದ್ದು ಅವರ ಹೇಳಿಕೆಯನ್ನು ಪಡೆದು ವಾಹನವನ್ನು ಬಿಡುಗಡೆ ಮಾಡಿದ್ದೇನೆ. ದಿನಾಂಕ 18-12-2012 ರಂದು ಫ್ರಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದೇನೆ. ಸಾಕ್ಷಿ ಗುರುತಿಸಿರುವ ಗಾಯದ ಪ್ರಮಾಣ ಪತ್ರವನ್ನು ನಿಪಿ-13 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಫ್ರಾಸಾ-9 ರವರಿಗೆ ಸಲ್ಲಿಸಿದ್ದೇನೆ. ಈಗ ನೋಡುತ್ತಿರುವ ನಿಪಿ-3 ರಿಂದ 8 ರ ಹೇಳಿಕೆಯನ್ನು ನಾನೇ ಪಡೆದಿದ್ದೇನೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**